## ಸಿ.ಆರ್. ಸಿಂಹ

ರಂಗ ಮಂದಿರ ಸ್ಥಾಪನೆ, ನಾಟಕ ರಚನೆ, ನಿರ್ದೇಶನ, ದೂರದರ್ಶನದ ಧಾರವಾಹಿಗಳಲ್ಲಿ, ಸಿನೆಮಾ ಹಾಗು ನಾಟಕಗಳಲ್ಲಿ ಅಭಿನಯ, ಬರವಣಿಗೆ, ಈ ಎಲ್ಲ ಕ್ಷೇತ್ರಗಳಲ್ಲಿ ಚಿರಪರಿಚಿತವಾದ ಹೆಸರು ಸಿ.ಆರ್. ಸಿಂಹ. ಇವರ ಕಲಾ ಪ್ರತಿಭೆಗೆ ಸ್ಪಂದಿಸದ ಕ್ಷೇತ್ರವೇ ಇಲ್ಲ, ಇಂತಹ ಪ್ರತಿಭೆಗಳು ವಿರಳ. ಕೈ ಹಾಕಿದ ಕ್ಷೇತ್ರಗಳಲ್ಲೆಲ್ಲಾ ಸಫಲತೆ ಕಂಡಿರುವ ವ್ಯಕ್ತಿಗಳಂತೂ ಇನ್ನೂ ವಿರಳ. ಈ ರೀತಿಯ ವಿರಳ ವ್ಯಕ್ತಿಗಳಲ್ಲಿ ನಮ್ಮ ನಿಮ್ಮೆಲ್ಲರ ನೆಚ್ಚಿನ ಕಲಾವಿದ ಸಿ.ಆರ್.ಸಿಂಹ ಒಬ್ಬರು ಎಂದರೆ ಅತಿಶಯೋಕ್ತಿಯಾಗಲಾರದು.

೧೯೪೨ರ ಜೂನ್ ೧೬ರಂದು ಜನಿಸಿದ ಸಿಂಹರವರು ತಮ್ಮ ಹನ್ನೊಂದನೇ ಕಿರಿಯ ವಯಸ್ಸಿನಲ್ಲಿಯೇ ಅವರ ತಾತ ಶ್ರೀ ಸಿ.ಎನ್ ಶಾಸ್ತ್ರಿ ರಚಿಸಿದ "ವಿಶ್ವ ವ್ಯವಸ್ಥೆ" ನಾಟಕದಲ್ಲಿ ನಟಿಸುವುದರೊಂದಿಗೆ ಮೊದಲ ಬಾರಿ ರಂಗಮಂಚವನ್ನೇರಿದರು. ಬೆಂಗಳೂರಿನ ನ್ಯಾಶನಲ್ ಕಾಲೇಜಿನಲ್ಲಿರುವಾಗ ಅಭಿನಯ ಕ್ಷೇತ್ರದಲ್ಲಿ ಹೆಚ್ಚಿನ ನೈಪುಣ್ಯತೆಯನ್ನು ಬೆಳೆಸಿಕೊಂಡರು. ತಮ್ಮ ನಟನಾ ಚಾತುರ್ಯವನ್ನು ವಿಕಾಸಗೊಳಿಸಿಕೊಂಡರು. ನ್ಯಾಶನಲ್ ಕಾಲೇಜಿನ "ಹಿಸ್ಟ್ರಿಯಾನಿಕ್ ಕ್ಲಬ್" ನ ಸದಸ್ಯರಾಗಿದ್ದ ಇವರು "ಬಹದ್ದೂರ್ ಗಂಡ", "ಮನವೆಂಬ ಮರ್ಕಟ" ಮುಂತಾದ ನಾಟಕಗಳಲ್ಲಿ ಅಭಿನಯಿಸಿದರು.

ಆದರೆ ಇವರ ನಟನಾ ಕಲೆಗೆ ಪ್ರಮುಖ ತಿರುವು ಕೊಟ್ಟ ನಾಟಕವೆಂದರೆ, ೧೯೬೫ರಲ್ಲಿ ಪ್ರದರ್ಶನಗೊಂಡ ಶ್ರೀ ಗಿರೀಶ್ ಕಾರ್ನಾಡ್ ರವರ "ತುಘಲಕ್" ಎಂಬುದು. ಈ ನಾಟಕದಲ್ಲಿ ವೈಭವಪೂರ್ಣ ಹಾಗೂ ಕ್ಲಿಷ್ಟಕರವಾದ ಪಾತ್ರವೇ "ತುಘಲಕ್", ಈ ಪಾತ್ರವನ್ನು ಅತ್ಯದ್ಬುತವಾಗಿ ನಿರ್ವಹಿಸಿ ಜನರ ಪ್ರೀತಿಗಳಿಸಿಕೊಂಡವರು ಶ್ರೀ ಸಿಂಹ.

ಇವರ ಕಲಾಪ್ರತಿಭೆ ಕನ್ನಡ ಭಾಷೆಗಷ್ಟೇ ಸೀಮಿತವಾದುದಲ್ಲ, ಇಂಗ್ಲಿಷ್ ರಂಗಮಂದಿರದಲ್ಲೂ ತಮ್ಮ ಪ್ರತಿಭೆಯನ್ನು ಪ್ರದರ್ಶಿಸಿ, ನಿರ್ದೇಶಿಸಿ, ಭಾಷಾನುವಾದ ಮಾಡಿ, ಸಫಲತೆ ಪಡೆದ ಮಹಾನ್ ಕಲಾವಿದರು ಇವರು.

ಕನ್ನಡ ರಂಗಮಂಚದಲ್ಲಿ ಇವರ ಕೈ ಚಳಕದ ಕಿರು ಪರಿಚಯ ಹೀಗಿದೆ- ಸಿಂಹ ರವರು ೧೯೭೨ರಲ್ಲಿ "ನಟರಂಗ" ಎಂಬ ರಂಗಕಲಾವೃಂದವೊಂದನ್ನು ಪ್ರಾರಂಭಿಸಿದರು. ಮಾಸ್ತಿಯವರ "ಕಾಕನ ಕೋಟೆ", ಗಿರೀಶ್ ಕಾರ್ನಾಡರ "ತುಘಲಕ್" ಮತ್ತು "ತಲೆದಂಡ", ಪಿ.ಲಂಕೇಶ್ ಅವರ "ಸಂಕ್ರಾಂತಿ", ಶೂದ್ರಕನ "ಮೃಚ್ಛಕಟಿಕ" ಹೀಗೆ ಹಲವಾರು ನಾಟಕಗಳನ್ನು ನಿರ್ದೇಶಿಸಿ ನಟಿಸಿದರು, ಅಷ್ಟೇ ಅಲ್ಲ, ಬೆಕೆಟ್ ರವರ "ಗೋಡಾಟ್", ಶೇಕ್ಸ್ ಪಿಯರ್ ರವರ "ಮಿಡ್-ಸಮ್ಮರ್ ನೈಟ್ಸ್ ಡ್ರೀಮ್" ಮತ್ತು "ಒಥೆಲೋ", ಬ್ರೆಕ್ಟ್ಸ್ ರವರ "ಚಾಕ್ ಸರ್ಕಲ್", ಎಂಬ ಇಂಗ್ಲಿಷ್ ನಾಟಕಗಳನ್ನು ಅನುವಾದಿಸಿ, ನಟಿಸಿ ನಿರ್ದೇಶಿಸಿದರು. ಅದುವರೆವಿಗೆ ನಾಟಕಗಳ ಅಳವಡಿಕೆ ಮಾತ್ರ ಪ್ರದರ್ಶಿಸಲ್ಪಡುತ್ತಿತ್ತು, ಆದರೆ ಸಿಂಹರವರು ಕರ್ನಾಟಕದಲ್ಲೇ ಮೊದಲ ಬಾರಿಗೆ ರಂಗಭೂಮಿಯ ಮೇಲೆ ನೇರ ಭಾಷಾನುವಾದದೊಂದಿಗೆ ಶೇಕ್ಸ್‌ಪಿಯರನ ನಾಟಕಗಳನ್ನು ಪ್ರದರ್ಶಿಸಿದರು. ಈ ನಾಟಕಗಳು ದೇಶದ ಎಲ್ಲ ಪ್ರಮುಖ ಕೇಂದ್ರಗಳಲ್ಲಿ ಪ್ರದರ್ಶನ ಕಂಡವು. ಹವ್ಯಾಸಿ ಕಾಲಾವಿದರ ಹುಮ್ಮಸ್ಸು ಮತ್ತು ವೃತ್ತಿಪರರ ನೈಪುಣ್ಯತೆಯನ್ನು ಮೇಳೈಸಿಕೊಂಡ ಹೊಸ ರಂಗವೃಂದವೊಂದನ್ನು ೧೯೮೩ರಲ್ಲಿ ಪ್ರಾರಂಭ್ಸಿ, ಇದಕ್ಕೆ "ವೇದಿಕೆ" ಎಂಬ ಹೆಸರನ್ನಿಟ್ಟು ಕನ್ನಡನಾಡಿನಲ್ಲೇ ಪ್ರಸಿದ್ಧ ಸ್ಥಾನ ದೊರಕಿಸಿಕೊಟ್ಟರು . "ವೇದಿಕೆ" ಸಿ.ಆರ್.ಸಿಂಹರ ಎರಡನೆಯ ಸೃಷ್ಟಿ. ಸಿ.ಆರ್.ಸಿಂಹರವರನ್ನು ಸಫಲತೆಯ ಉತ್ತುಂಗ ಶಿಖರಕ್ಕೇರಿಸಿದ ಏಕಪತ್ರಾಭಿನಯ ನಾಟಕವೇ ಶ್ರೀ.ನರಸಿಂಹನ್ ವಿರಚಿತ "ಟಿಪಿಕಲ್ ಟಿ.ಪಿ.ಕೈಲಾಸಂ" ಎಂಬುದು. ಕನ್ನಡನಾಡಿನಿಂದ ಹೊರದೇಶಕ್ಕೆ ಹೋಗಿ ಇತಿಹಾಸ ಸೃಷ್ಟಿಸಿದ ಇದು ಭಾರತದಲ್ಲೇ ಅಲ್ಲದೆ ಅಮೇರಿಕ, ಕೆನಡ ಮತ್ತು ಇಂಗ್ಲೆಂಡ್ ಗಳಲ್ಲೂ ಹಲವು ಬಾರಿ ಪ್ರದರ್ಶನ ಕಂಡಿತು. ಇಂದಿಗೂ ಜನಮಾನಸದಲ್ಲಿ ಉಳಿದಿರುವ ಈ ನಾಟಕ "ರಾಷ್ಟ್ರೀಯ ನಾಟಕೋತ್ಸವ"-ನವದೆಹಲಿಯಲ್ಲಿ

ಪ್ರದರ್ಶನಗೊಂಡಿದೆ. "ವೇದಿಕೆ"ಯ ಇತರೆ ನಾಟಕ / ಪ್ರಹಸನಗಳೆಂದರೆ: ಮೀಸೆ ಬಂದೋರು, ಭೈರವಿ, ಕರ್ಣ, ರಸರಿಷಿ, ಕೋಲ್ಮಿಂಚು, ಅಗ್ನಿ ಮತ್ತು ಮಳೆ , ಹಾವು-ಏಣಿ.

**ಆಂಗ್ಲ ರಂಗದಲ್ಲಿ ಈ ಕನ್ನಡಿಗನ ಸಾಧನೆಗಳು:**

೧೯೬೦ರಿಂದಲೂ "ಬೆಂಗಳೂರ್ ಲಿಟಲ್ ಥಿಯೇಟರ್"ನ ಸದಸ್ಯರಾದ ಸಿ.ಆರ್.ಸಿಂಹರವರು, ಮೋಲಿರೆ, ಬರ್ನಾರ್ಡ್ ಶಾ, ಎಡ್ವರ್ಡ್ ಅಲ್ಬೀ , ನೀಲ್ ಸಿಮೋನರಂಥ ಪ್ರಖ್ಯಾತ ನಾಟಕಕಾರರ ನಾಟಕಗಳಲ್ಲಿ ಪಾತ್ರ ನಿರ್ವಹಿಸಿದ್ದಾರೆ. "ಸೈರನೊ-ಡಿ-ಬೆರ್ಗೆರ್ಯಾಕ್" ಪಾತ್ರಧಾರಿಯಾಗಿ ಇವರು ಮಾಡಿರುವ ಅಭಿನಯ ಜನರ ಮನದಲ್ಲಿ ಇಂದಿಗೂ ಅಚ್ಚಳಿಯದೆ ಉಳಿದಿದೆ. ಬರಿ ನಟನಾಗಿಯೆ ಅಲ್ಲ, ನಿರ್ದೇಶಕನಾಗಿಯೂ ಸಿ.ಆರ್. ತಮ್ಮ ಕೀರ್ತಿಯನ್ನು ಬೆಳಗಿಸಿರುತ್ತಾರೆ, ಇವರ ನಿರ್ದೇಶನದಡಿ ತಯಾರಾದ ಉತ್ಪಲ ದತ್ತರ "ಸೂರ್ಯ ಶಿಕಾರಿ" ಮತ್ತು ಗಿರೀಶ್ ಕಾರ್ನಾಡರ "ತೊಘಲಖ್" ನಾಟಕಗಳೇ ಇದಕ್ಕೆ ಸಾಕ್ಷಿ.

**ನಾಟಕಕಾರ ಹಾಗೂ ಬರಹಗಾರರಾಗಿ-ಸಿಂಹರ ಸಾಧನೆಗಳು:**

- ನೀಲ್ ಸಿಮೋನ್ ರವರ "ಕಮ್ ಬ್ಲೊವ್ ಯುವರ್ ಹಾರ್ನ್" ಎಂಬ ರಚನೆಯನ್ನು ಕನ್ನಡಕ್ಕೆ ಅಳವಡಿಸಿ "ಮೀಸೆ ಬಂದೋರು" ಎಂದು ಹೆಸರಿಸಿದ್ದಾರೆ.
- "ಕರ್ಣ" ಮಹಾಭಾರತದ ಈ ಸುಪ್ರಸಿದ್ಧ ಪಾತ್ರಕ್ಕೆ ಸಮಕಾಲೀನ ಸಂಸ್ಕರಣ ಮಾಡಿದರು.
- ಭೈರವಿ-ಪೀಟರ್ ಶಫರ್ಡ್ ರವರ ಅಮೆಡ್ಯೂಸ್ ನಾಟಕವನ್ನು ಕನ್ನಡಕ್ಕೆ ಅಳವಡಿಸಿದರು.
- ಭೈರವಿ ಮತ್ತು ಕರ್ಣ ಇವೆರಡೂ ಶ್ರೀಯುತರ ಪ್ರಕಟಿತ ಕೃತಿಗಳು.
- ರಸ ರಿಷಿ- ಇದು ಕನ್ನಡದ ಸುಪ್ರಸಿದ್ಧ ಕವಿ ಕುವೆಂಪುರವರ ಜೀವನ, ಸಾಹಿತ್ಯ ಸಾಧನೆ ಹಾಗು ಅವರ ದೃಷ್ಟಿಕೋಣವನ್ನು ದೃಶ್ಯರೂಪಕವಾಗಿ ನೆಯ್ದರು.
- ವಿಜಯ ಕರ್ನಾಟಕ ದಿನಪತ್ರಿಕೆಯಲ್ಲಿ ಪ್ರತಿ ಶುಕ್ರವಾರ "ಕಲೆ ಸಾಹಿತ್ಯ ಮತ್ತು ಜೀವನ" ಎಂಬ ಅಂಕಣದಲ್ಲಿ ಇವರ ಬರಹ "ನಿಮ್ಮ ಸಿಂಹ" ಎಂಬ ಶೀರ್ಷಿಕೆಯಡಿ ಪ್ರಕಟಗೊಳ್ಳುತ್ತಲಿದ್ದು ತುಂಬಾ ಜನಮೆಚ್ಚಿಗೆ ಪಡೆಯುತ್ತಲಿದೆ.

ಚಲನಚಿತ್ರರಂಗದ ಸಾಧನೆಗಳು: ಸಂಸ್ಕಾರ, ಸಂಕಲ್ಪ, ಅನುರೂಪ, ಬರ ಮತ್ತು ಚಿತೆಗೂ ಚಿಂತೆ ಹೀಗೆ ಹಲವಾರು ರಾಜ್ಯ ಹಾಗೂ ರಾಷ್ಟ್ರ ಪ್ರಶಸ್ತಿ ವಿಜೇತ ಸಿನೆಮಾಗಳಲ್ಲಿ ಅಭಿನಯಿಸಿರುತ್ತಾರೆ. ನೂರಕ್ಕೂ ಹೆಚ್ಚು ವಾಣಿಜ್ಯ ಚಿತ್ರಗಳಲ್ಲೂ ಅಭಿನಯಿಸಿರುತ್ತಾರೆ. ಅವುಗಳಲ್ಲಿ ಕೆಲವು- ಹನ್ನೆರಡು ಸೂತ್ರಗಳು. ರಾಮಪುರದ ರಾವಣ, ಇಂದಿನ ರಾಮಾಯಣ, ಶರವೇಗದ ಸರದಾರ, ನೀ ಬರೆದ ಕಾದಂಬರಿ, ದಿಗ್ವಿಜಯ, ಬೇಟೆ, ರಾಯರು ಬಂದರು ಮಾವನ ಮನೆಗೆ, ಟುವ್ವಿ-ಟುವ್ವಿ, ಸುವ್ವಿ-ಸುವ್ವಲಾಲಿ, ಗಡಿಬಿಡಿ ಕೃಷ್ಣ, ಶಿವ ಸೈನ್ಯ, ಇನ್ನು ಹಲವಾರು ಇವೆ.

ಸಿಂಹರವರು ನಿರ್ದೇಶನದಲ್ಲಿ ತೆರೆಕಂಡ ಕೆಲವು ಚಲನಚಿತ್ರಗಳು ( ಸಿನೆಮಾಗಳು )-ಕಾಕನ ಕೋಟೆ, ಶಿಕಾರಿ, ಅಶ್ವಮೇಧ, ಸಿಂಹಾಸನ ಮತ್ತು ಅಂಗೈಯಲ್ಲಿ ಅಪ್ಸರೆ.

**ದೂರದರ್ಶನ ಕಾರ್ಯಕ್ರಮಗಳು-**

ದೂರದರ್ಶನದ ಹಲವಾರು ಕನ್ನಡ ಧಾರವಾಹಿಗಳಲ್ಲೂ ಅಭಿನಯಿಸಿರುತ್ತಾರೆ-ಅವುಗಳಲ್ಲಿ ಕೆಲವು ವೈದ್ಯೋ ನಾರಾಯಣೋ ಹರಿ, ಪ್ರತಿಧ್ವನಿ, ನಾವೆಲ್ಲರೂ ಒಂದೇ, ನೀತಿಚಕ್ರ, ಇನ್ನೂ ಮುಂತಾದವು.
ಹಿಂದಿ ಧಾರವಾಹಿಗಳಾದ ಸಾರಾ ಜಹ್ವಾನ್ ಹಮಾರಾ, ಘರ್ ಜಮಾಯಿ, ಸಂಸ್ಮರಣ್(ಈ ಧಾರವಾಹಿಯ ಚಿತ್ರೀಕರಣ ೧೯೯೪ರಲ್ಲಿ ಸಂಪೂರ್ಣವಾಗಿ ಹಾಲಿವುಡ್ ಸೇರಿದಂತೆ ಅಮೇರಿಕಾದಲ್ಲೆ ನಡೆದಿರುತ್ತದೆ,ಇದರಲ್ಲಿ

ಸಿ.ಆರ್.ಹೆಸರಾಂತ ಬರಹಗಾರ ಶ್ರೀ. ಗೊರೂರು ರಾಮಸ್ವಾಮಿ ಐಯ್ಯಂಗಾರ್ ರವರ ಪಾತ್ರನಿರ್ವಹಣೆಮಾಡಿರುತ್ತಾರೆ), ಕೃಷ್ಣಾವತಾರ, ಪ್ರೊ.ವಾಸನ್, ಬಿ.ಬಿ.ಸಿ. ಯ ಇಂಗ್ಲಿಷ್ ಟೆಲಿ ಧಾರಾವಾಹಿ- "ರ್‍ಯಾಗ್ ಪಿಕ್ಕರ್ಸ್" ಸೇರಿದಂತೆ ಇನ್ನೂ ಹಲವಾರು ಧಾರವಾಹಿಗಳಲ್ಲಿ ಅಭಿನಯಿಸಿರುತ್ತಾರೆ.

**ಈ ಕಲಾಪುಂಗವರಿಗೆ ದಕ್ಕಿದ ಪ್ರಶಸ್ತಿಗಳು:**

- "ಕಾಕನ ಕೋಟೆ" ಚಲನಚಿತ್ರಕ್ಕಾಗಿ ಅತ್ಯುತ್ತಮ ನಿರ್ದೇಶಕ ಪ್ರಶಸ್ತಿ-ರಾಜ್ಯ ಸರ್ಕಾರದಿಂದ(೧೯೭೮)
- ಕರ್ನಾಟಕ ರಾಜ್ಯ ನಾಟಕ ಅಕಾಡೆಮಿ ಪ್ರಶಸ್ತಿ(೧೯೮೬)
- ಶಂಕರೇಗೌಡ ರಂಗಮಂದಿರ ಪ್ರಶಸ್ತಿ(೧೯೯೩)
- ಶ್ರೇಷ್ಠತೆಗೆ ಸಂದ ಸಂತೃಪ್ತಿ ಪ್ರಶಸ್ತಿ
- ರಂಗಭೂಮಿಗೆ ಇವರ ಮಹತ್ತರ ಕೊಡುಗೆಯನ್ನು ಗುರುತಿಸಿ ರಾಜ್ಯೋತ್ಸವ ಪ್ರಸ್ತಸ್ತಿ(೨೦೦೦)
- ಕೇಂದ್ರ ಸಂಗೀತ ನಾಟಕ ಅಕಾಡೆಮಿ ಪ್ರಶಸ್ತಿ(೨೦೦೪)-ಡೆಲ್ಲಿ

ಬನ್ನಿ, ಇಂತಹ ಮಹಾನ್ ಬಹುಮುಖ ರಂಗಪ್ರತಿಭೆಗೆ "ಕುವೈಟ್ ಕನ್ನಡ ಕೂಟ"ದ ವತಿಯಿಂದ "ವಿಶ್ವ ಕನ್ನಡ ಸಂಸ್ಕೃತಿ ಸಮ್ಮೇಳನ-೨೦೦೭" ಕ್ಕೆ ನಾವೆಲ್ಲ ಹೃತ್ಪೂರ್ವಕ ಸ್ವಾಗತವನ್ನು ಕೋರೋಣ.